**ದಿನಾಂಕ: 29-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ_ಪಾಟೀ ಸವಾಲು : ಶ್ರೀ ಹೆಚ್ ಆರ್ ಆರ್ ವಕೀಲರಿಂದ ಆರೋಪಿ ಪರವಾಗಿಃ**

16) ಆರೋಪಿಯ ಹತ್ತಿರ ಸ್ವಂತ ಕಾರು ಇದೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಸನದಲ್ಲಿ ಆರೋಪಿಗೆ ಮನೆ ಇದ್ದು ಅದನ್ನು ನೋಡಿದ್ದೀರಾ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಸನದ ಜಯನಗರದಲ್ಲಿ ಆರೋಪಿಯ ಮನೆ ಇದೆ ಎನ್ನುವುದು ಸರಿ. ಆರೋಪಿಯ ಮನೆ ಪ್ರತಿಷ್ಠಿತ ಬಡಾವಣೆಯಲ್ಲಿದ್ದು, ಅದು ಅವರ ಸ್ವಂತ ಮನೆ ಎಂದು ಸೂಚಿಸಲಾಗಿ ಸಾಕ್ಷಿ ಗೊತ್ತಿಲ್ಲ, ಆದರೇ ಆರೋಪಿ ಮನೆಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಒಂದು ಭಾಗವನ್ನು ಬಾಡಿಗೆಗೆ ನೀಡಿದ್ದು, ರೂ.20 ಸಾವಿರ ಬಾಡಿಗೆ ಬರುತ್ತಿದ್ದೆ ಎಂದು ಸೂಚಿಸಲಾಗಿ ಸಾಕ್ಷಿ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಮನೆ ಈಗ ರೂ.2 ಕೋಟಿ ಬೆಲೆ ಬಾಳುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

17) ಆರೋಪಿಯ ಮನೆ ಪಕ್ಕ ಖಾಲಿ ನಿವೇಶನ ಇದ್ದು, ಅದು ಸಹ ಆರೋಪಿಗೆ ಸೇರಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಹೆಸರಿನಲ್ಲಿ ಇನ್ನೂ ಹಲವಾರು ನಿವೇಶಗಳಿವೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

18) ಕಾಫಿಯಿಂದ ಬರುವ ಆದಾಯವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯ ಇರುವುದಿಲ್ಲ. ಕಾಫಿಯನ್ನು ಟ್ರೇಡರ್ಸ್ ಗೆ ನೀಡಿದಾಗ ಯಾವ ತಿಂಗಳಿನಲ್ಲಿ ಬಿಲ್ ಮಾಡಿಸಿಕೊಳ್ಳುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮಗೆ ಅವಶ್ಯಕತೆ ಇದ್ದಾಗ ಯಾವ ತಿಂಗಳಿನಲ್ಲಿ ಬೇಕಾದರು ಮಾಡಿಸಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. 2020 ರಲ್ಲಿ ಯಾವ ತಿಂಗಳಿನಲ್ಲಿ ಬಿಲ್ ಮಾಡಿಸಿಕೊಂಡಿರುತ್ತೇನೆ ಎಂದು ಈಗ ಹೇಳಲು ಆಗುವುದಿಲ್ಲ.

19) ಆರೋಪಿಯು ರೂ. 6 ಲಕ್ಷ ಹಣವನ್ನು ಯಾವಾಗ ಹಿಂತಿರುಗಿಸುತ್ತೇನೆಂದು ಹೇಳಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ನಿವೇಶನಗಳನ್ನು ಮಾಡುತ್ತಿರುತ್ತೇನೆ ಆದರೆ ನಿವೇಶನ ಕೊಡುತ್ತೇನೆ, ಆಗದಿದ್ದರೇ ಹಣ ಹಿಂತಿರುಗಿಸುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

20) ನಿಮ್ಮ ಭಾವ ಗಂಗಾಧರ್ ಹಾಸನದ ಸಹ್ಯಾದ್ರಿ ಸರ್ಕಲ್ ನಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ ಎಂದು ಸೂಚಿಸಲಾಗಿ ಸಾಕ್ಷಿ ಮೊದಲು ಆಲೂರಿನಲ್ಲಿದ್ದು, ಈಗ ಹಾಸನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಗೌರಿ ಹಬ್ಬಕ್ಕೆ ತವರು ಮನೆಯಿಂದ ಹೆಣ್ಣು ಮಕ್ಕಳಿಗೆ ಅರಿಶಿನ ಕುಂಕುಮ ಕೊಡುತ್ತಾರೆ ಎನ್ನುವುದು ಸರಿ. ನಮ್ಮ ಕಲಾವತಿ ನಮ್ಮ ಜೊತೆಯಲ್ಲಿ ವಿಶ್ವಾಸದಲ್ಲಿ ಇಲ್ಲದೇ ಇರುವ ಕಾರಣ ನಾನು ಅರಿಶಿನ ಕುಂಕುಮ ಕೊಡುತ್ತಿರುವುದಿಲ್ಲ.

21) ಯಾವ ಉದ್ದೇಶಕ್ಕಾಗಿ ಹಣವನ್ನು ಮನೆಯಲ್ಲಿ ಇಟ್ಟಿಕೊಂಡಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಕಾಫಿ ಮಾರಿದ ಹಣ ಮನೆಯಲ್ಲಿ ಇಟ್ಟಿಕೊಂಡಿದ್ದೆ ಎಂದು ನುಡಿಯುತ್ತಾರೆ. ಬ್ಯಾಂಕಿನಿಂದ ಯಾವುದೇ ಹಣ ಡ್ರಾ ಮಾಡಿರುವುದಿಲ್ಲ. ನನ್ನ ಹತ್ತಿರ ಮೊದಲೇ ರೂ.3 ಲಕ್ಷ ಹಣ ಇದ್ದು, ಕಾಫಿ ಮಾರಿದ ಹಣ ರೂ.3 ಲಕ್ಷ ಇದ್ದು, ಅದನ್ನೇ ಆರೋಪಿಗೆ ನಗದಾಗಿ ಒಟ್ಟು ರೂ.6 ನೀಡಿರುತ್ತೇನೆ. ರೂ.3 ಲಕ್ಷ ಹಣ ಕೊಟ್ಟ ಸಮಯದಲ್ಲಿ ಕಾಫಿ ಕೊಟ್ಟಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಕಾಫಿ ಕೊಟ್ಟರೂ ಕೊಡುತ್ತಾರೆ, ಇಲ್ಲದಿದ್ದರೂ ಬೇಕಾದಾಗ ವಿಶ್ವಾಸದಿಂದ ಹಣ ಕೊಡುತ್ತಾರೆ ಎಂದು ನುಡಿಯುತ್ತಾರೆ. ಭದ್ರತೆ ಪಡೆಯದೇ ಕಾಫಿ ಟ್ರೇಡರ್ಸ್ ನವರು ಹಣ ಕೊಡುತ್ತಾರೆ.

22) ಮನೆಯಲ್ಲಿ ನನ್ನ ಹತ್ತಿರ ರೂ.3 ಲಕ್ಷ ಹಣ ಇದ್ದ ಬಗ್ಗೆ ದಾಖಲೆ ಇರುವುದಿಲ್ಲ. ಕಾಫಿ ಟ್ರೇಡರ್ಸ್ ನವರು 500 ರೂ. ಮುಖಬೆಲೆಯ ನೋಟುಗಳನ್ನು ನೀಡಿದ್ದರು. ಎಷ್ಟು ಬಂಡಲ್ ಇತ್ತು ಎಂದು ಪ್ರಶ್ನಿಸಲಾಗಿ ಸಾಕ್ಷಿ ಇವೆಲ್ಲಾ ಗೊತ್ತಿಲ್ಲ , ಆದರೇ ರೂ. 3 ಲಕ್ಷ ಹಣ ಇತ್ತು ಎಂದು ನುಡಿಯುತ್ತಾರೆ.

23) ನಿಮಗಿಂತ ಆರೋಪಿ ಆರ್ಥಿಕ ಸ್ತಿತಿಯಲ್ಲಿ ಉತ್ತಮರಾಗಿದ್ದು, ನಿಮ್ಮಿಂದ ಹಣ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಲೇಔಟ್ ಮಾಡುವ ಸಲುವಾಗಿ ಪಡೆದಿದ್ದರು ಎಂದು ನುಡಿಯುತ್ತಾರೆ. ಆರೋಪಿ ಹಣ ಪಡೆಯಲು ಬಂದಾಗ ಅರ್ಧ ಗಂಟೆ ಇದ್ದರು. ಆರೋಪಿ ನಮ್ಮ ಮನೆಯಿಂದ ಹೋಗುವಾಗ 3, 3-30 ಗಂಟೆ ಆಗಿರಬಹುದು.

24) ನಿಮ್ಮ ಮನೆಯಿಂದ ಬಿಕ್ಕೋಡು ಗ್ರಾಮಕ್ಕೆ 7 ರಿಂದ 10 ಕಿ. ಮೀ. ಆಗುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ 5 ಕಿ.ಮೀ. ಆಗುತ್ತದೆ ಎಂದು ನುಡಿಯುತ್ತಾರೆ. ಬಿಕ್ಕೋಡಿದಿಂದ ಹಾಸನಕ್ಕೆ 24 ಗಂಟೆಯು ಸಾರಿಗೆ ವ್ಯವಸ್ಥೆ ಇರುತ್ತದೆ. ಬಿಕ್ಕೋಡು ಹೋಬಳಿಯಾಗಿರುತ್ತದೆ. ಸಂಜೆ 4 ಗಂಟೆಯ ನಂತರ ಬಿಕ್ಕೋಡಿನಿಂದ ಯಾವುದೇ ಸಾರಿಗೆ ವ್ಯವಸ್ಥೆ ಇರುವುದಿಲ್ಲ ಎಂದರೆ ಸರಿಯಲ್ಲ.

25) ಕೇಸನ್ನು ಹಾಕುವ ಪೂರ್ವದಲ್ಲಿ ನಿಮ್ಮ ಭಾವ ಗಂಗಾಧರ್ ನಿಂದ ಮಾಹಿತಿ ಪಡೆದು ಹಾಕಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮಗೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ವಕೀಲರಿಗೆ ಶುಲ್ಕವನ್ನು ಗಂಗಾಧರ್ ರವರೇ ನೀಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಮ್ಮನೇ ನ್ಯಾಯಾಲಯಕ್ಕೆ ಬರುವುದು ಹೋಗುವುದು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ.

26) ಚೆಕ್ ನ್ನು ಯಾರ ಕೈಯಲ್ಲಿ ಬರೆಸಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಯಾರು ಬರೆದಿರುತ್ತಾರೋ ಗೊತ್ತಿಲ್ಲ , ಆದರೇ ಚೆಕ್ ಗೆ ಆರೋಪಿಯೇ ನನ್ನ ಸಮಕ್ಷಮ ಸಹಿ ಮಾಡಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಬರಿ ಸಹಿ ಮಾಡಿ ಕೊಟ್ಟಿರುತ್ತಾರೆ. ನಿಪಿ 1 ಚೆಕ್ ನಲ್ಲಿ ಅಕೌಂಟ್ ಪೇಯಿ ಎನ್ನುವ ಬರಹ ಮತ್ತು ಇತರೆ ಬರಹ ಮತ್ತು ಸಹಿಗಳು ಬೇರೆ ಬೇರೆ ಬರಹದಲ್ಲಿದೆ ಎಂದು ಸೂಚಿಸಲಾಗಿ ಸಾಕ್ಷಿ ಸಹಿಯನ್ನು ಮಾತ್ರ ನನ್ನ ಸಮಕ್ಷಮ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿರುವ ಬರಹಗಳು ಬೇರೆ ಬೇರೆ ಶಾಹಿಯಲ್ಲಿ ಇದೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಆತರಹ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ಚೆಕ್ ಲ್ಲಿ ಬರೆದಿರುವ ಬರಹಗಳ ಬಗ್ಗೆ ನಿಮಗೆ ತಿಳಿದಿದೆಯಾ ಎಂದು

ಪ್ರಶ್ನಿಸಲಾಗಿ ಸಾಕ್ಷಿ ಚೆಕ್ ನ್ನು ನೀಡಿದಾಗ ನನ್ನ ಹೆಸರನ್ನು ಬರೆದು, ರೂ.6 ಲಕ್ಷ ಎಂದು ಇದ್ದು, ಸಹಿ ಇರಲಿಲ್ಲ, ಆಗ ಸಹಿ ಇಲ್ಲ ಎಂದು ಕೇಳಿದಾಗ ಆರೋಪಿ ನನ್ನ ಸಮಕ್ಷಮ ಸಹಿ ಮಾಡಿ ಕೊಟ್ಟರು ಎಂದು ನುಡಿಯುತ್ತಾರೆ.

27) ಪಿರ್ಯಾದಿಯಲ್ಲಿ ಬರೆದಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರದ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಭಾಗ ಗಂಗಾಧರ್ ರವರ ನಿರ್ದೇಶನದ ಮೇರೆಗೆ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .